# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.30/2022

CW-1/PW-2

| | | |
|---|---|---|
| ಹೆಸರು | : | ಸ್ವಾತಿ |
| ತಂದೆ ಹೆಸರು | : | ವೆಂಕಟಗಿರಯ್ಯ |
| ವಯಸ್ಸು | : | 29 ವರ್ಷ |
| ವೃತ್ತಿ | : | ಖಾಸಗಿ |
| ವಾಸ ಸ್ಥಳ | : | ಬೆಂಗಳೂರು. |
| ದಿನಾಂಕ | : | 26-02-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-2 ನನ್ನ ತಾಯಿ. ದಿನಾಂಕ 11.11.2021ರಂದು ನಾನು ಮತ್ತು ನನ್ನ ತಾಯಿ ಆಸ್ಪತ್ರೆಯಿಂದ ನಮ್ಮ ಮನೆಗೆ ಹೋಗುವಾಗ ನೇತಾಜಿ ಪಾಪ್ಯುಲರ್ ಶಾಲೆಯ ಬಳಿ ಮಹದೇಶ್ವರ ಪ್ರಾವಿಷನ್ ಸ್ಟೋರ್ ಬಳಿ ಶಾಲೆಯ ಕಡೆಯಿಂದ ಇಬ್ಬರು ಆಸಾಮಿಗಳು ಬಂದು ನನ್ನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಬೈಕಿನಲ್ಲಿ ಹೊರಟುಹೋದರು. ಆಗ ಸಮಯ ಅಂದಾಜು ಸಂಜೆ 4.45 ಗಂಟೆ. ನಾನು ಹಿಂದೆ ಅವರ ಹಿಂದೆ ಓಡಿ ಹೋದೆ, ಅಲ್ಲಿ ಒಬ್ಬ ಸಾರ್ವಜನಿಕರು ಬೈಕಿನಲ್ಲಿ ಬಂದು ನನ್ನನ್ನು ವಿಚಾರಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಾನು ಐಜೂರು ಪೊಲೀಸ್ ಠಾಣೆಯಲ್ಲಿ ದೂರನ್ನು ಬರೆದುಕೊಟ್ಟೆ. ದೂರನ್ನು ಅದೇ ದಿನ ಕೊಟ್ಟೆ. ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರನ್ನು ಈಗ ನಿಪಿ-3 ಎಂದು, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಿರುತ್ತೇನೆ.

2. ನಂತರ ಅದೇ ದಿನ ಪೊಲೀಸರು ಸ್ಥಳಕ್ಕೆ ಬಂದು ಸಂಜೆ 5.00-5.45ರ ಅವಧಿಯಲ್ಲಿ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಸದರಿ ಸ್ಥಳ ಪಂಚನಾಮೆಯನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು

ಗುರುತಿಸಿರುತ್ತೇನೆ. ಮಹಜರ್ ಕಾಲಕ್ಕೆ ಪುನೀತ್ ಮತ್ತು ಶರಣ್ ಎಂಬುವವರು ಹಾಜರಿದ್ದರು. ಜನವರಿ-2022ರಲ್ಲಿ ಬೆಂಗಳೂರಿನ ಸುಬ್ರಮಣ್ಯಪುರಂ ಪೊಲೀಸ್ ಠಾಣೆಯಲ್ಲಿ ನನ್ನ ಚೈನು ರಿಕವರಿ ಆಗಿದೆ ಎಂದು ಪೊಲೀಸರು ತಿಳಿಸಿದರು. ನಾವು ಬೆಂಗಳೂರಿನ ಸುಬ್ರಮಣ್ಯಪುರಂ ಪೊಲೀಸ್ ಠಾಣೆಗೆ ಹೋಗಿ ನಮ್ಮ ಚೈನನ್ನು ಬಿಡಿಸಿಕೊಂಡು ಬಂದೆವು. ಪೊಲೀಸ್ ಠಾಣೆಯಲ್ಲಿ ಒಬ್ಬ ಆಸಾಮಿ ಇದ್ದರು, ಅವರನ್ನು ಪೊಲೀಸರು ತೋರಿಸಿದರು, ನನ್ನ ಚಿನ್ನದ ಸರವನ್ನು ಕಿತ್ತುಕೊಂಡು ಹೋದ ಆಸಾಮಿ ಅವರೇ ಆಗಿದ್ದರು. ನನಗೆ ಸರವನ್ನು ಬಿಡುಗಡೆ ಮಾಡಿದ ಕಾಲಕ್ಕೆ ಪೊಲೀಸರು ಮಹಜರ್ ಮಾಡಿದರು. ಚೈನನ್ನು ಬಿಡುಗಡೆ ಮಾಡುವಾಗ ಪೊಲೀಸರು ಫೋಟೋ ತೆಗೆದರು. ನನ್ನ ಚಿನ್ನದ ಸರದ ಫೋಟೋಗಳನ್ನು ಈಗಾಗಲೇ ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಗಿದೆ. ಆ ಆಸಾಮಿಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಆಸಾಮಿಯನ್ನು ಜೈಲಿನಿಂದ ವಿ.ಸಿ. ಮುಖಾಂತರ ಹಾಜರುಪಡಿಸಿದ್ದು, ಅವರನ್ನು ಈಗ ನೋಡಿ ಗುರುತಿಸಿರುತ್ತೇನೆ. ನಾನು ನನ್ನ ಚಿನ್ನದ ಸರ ಬಿಡಿಸಿಕೊಳ್ಳುವಾಗ ನಷ್ಟ ಭರ್ತಿ ಪತ್ರ ಬರೆದುಕೊಟ್ಟಿರುತ್ತೇನೆ. ಪೊಲೀಸರು ಆರೋಪಿ ಸಿಕ್ಕಿದ ನಂತರ ಆತನ ಸಮಕ್ಷಮ ಸ್ಥಳ ಪಂಚನಾಮೆಯನ್ನು ಸಹ ಮಾಡಿರುತ್ತಾರೆ. ಆರೋಪಿ ಸಿಕ್ಕಿದ ನತಂರ ಆರೋಪಿಯ ಸಮಕ್ಷಮ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಮಹಜರನ್ನು ನಿಪಿ-5 ಎಂದು, ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್.ಎಸ್., ವಕೀಲರಿಂದಃ-</u>

ಕೃತ್ಯ ನಡೆದ ಸ್ಥಳಕ್ಕೂ, ಐಜೂರು ಪೊಲೀಸ್ ಠಾಣೆಗೂ ಒಂದರಿಂದ ಒಂದೂವರೆ ಕಿಲೋ ಮೀಟರ್ ದೂರ. ನಿಪಿ-3 ದೂರನ್ನು ನಾನೇ ಕೊಟ್ಟೆ. ನಿಪಿ-3ರಲ್ಲಿ ಏನು ಬರೆದಿದೆ ಎಂದು ಗೊತ್ತಿದೆ. ನಿಪಿ-3 ದೂರು ಕೊಟ್ಟದ್ದು ಘಟನೆಯಾದ 20 ದಿನಗಳ ನಂತರ ಎಂದರೆ ಸರಿಯಲ್ಲ. ನಿಪಿ-3ರಲ್ಲಿ ದಿನಾಂಕ 11.11.2021ಕ್ಕೆ ಘಟನೆ ಆಗಿದೆ ಎಂದು ಬರೆದಿದ್ದೇನೆ ಎಂದರೆ ಸರಿ. ಕೃತ್ಯ ನಡೆದು 20 ದಿನಗಳಾಗಿತ್ತು, ಪೊಲೀಸರು ಸಹಾಯ ಮಾಡಿ ಅವರ ಒತ್ತಾಯದ ಮೇರೆಗೆ

ನಿಪಿ-3 ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ದೂರನ್ನು ಪೊಲೀಸರು ಹೇಳಿದಂತೆ ಬರೆದಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಿಪಿ-3 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ದೂರನ್ನು ಘಟನೆಯಾದ ತಕ್ಷಣವೇ ಕೊಟ್ಟಿದ್ದೇನೆ. ದೂರು ಕೊಡಲು ನನ್ನನ್ನು ಕರೆದುಕೊಂಡು ಹೋದ ವ್ಯಕ್ತಿಯ ಹೆಸರು ನೆನಪಿಲ್ಲ. ಘಟನೆಯಾದ ತಕ್ಷಣ 100 ಮತ್ತು 112 ಸಹಾಯವಾಣಿಗೆ ದೂರವಾಣಿ ಕರೆ ಮಾಡಲಿಲ್ಲ.

2. ಕೃತ್ಯ ನಡೆದಾಗ ಸಂಜೆ 4.45 ಗಂಟೆ. ಆ ಕಾಲಕ್ಕೆ ಬೆಳಕು ಇತ್ತು ಎಂದರೆ ಸರಿ. ಸದರಿ ಸ್ಥಳದಲ್ಲಿ ಸ್ವಲ್ಪ ಜನ ಮಾತ್ರ ಇದ್ದರು. ಸಂಜೆ 4.45 ಗಂಟೆ ಸಮಯಕ್ಕೆ ಶಾಲೆಯ ಮಕ್ಕಳನ್ನು ಬಿಡುವ ಸಮಯ ಎಂದರೆ ಸರಿ. ಆ ಸಮಯದಲ್ಲಿ ವಾಹನಗಳು, ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಗಾಡಿಗಳಲ್ಲಿ ಜೋರಾಗಿ ಓಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ನಿಧಾನವಾಗಿ ಬಂದು ಚೈನನ್ನು ಕಿತ್ತುಕೊಂಡು ವೇಗವಾಗಿ ಗಾಡಿಯಲ್ಲಿ ಹೊರಟುಹೋದರು ಎಂದು ನುಡಿಯುತ್ತಾರೆ. ಆ ಆಸಾಮಿಗಳು ಶಾಲೆಯ ಕಡೆಯಿಂದ ಬೈಕಿನಲ್ಲಿ ಬರುವುದನ್ನು ನೋಡಿದೆ. ಆದರೆ ಸ್ಪಷ್ಟವಾಗಿ ಗುರುತಿಸಲು ಆಗಲಿಲ್ಲ. ಆಸಾಮಿಗಳು ಬರುತ್ತಿದ್ದ ಗಾಡಿಯ ನಂಬರನ್ನು ನಾನು ನೋಡಲಿಲ್ಲ. ಆಸಾಮಿಗಳು ಬೈಕಿನಲ್ಲಿ ವೇಗವಾಗಿ ಹೋಗುವಾಗ ಬೈಕಿನ ನಂಬರನ್ನು ನಾನು ನೋಡಲಿಲ್ಲ. ಆಸಾಮಿಗಳು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನೆನಪಿಲ್ಲ, ಆದರೆ ರೌಂಡ್ ನೆಕ್ ಬಟ್ಟೆ ಧರಿಸಿದ್ದರು. ಆ ಇಬ್ಬರೂ ಆಸಾಮಿಗಳು ಕಪ್ಪು ಬಣ್ಣ ಹೊಂದಿದ್ದರು. ಆ ಆಸಾಮಿಗಳು ನೆಕ್ ರೌಂಡ್ ಟೀ-ಷರ್ಟ್ ಧರಿಸಿದ್ದರು ಎಂದು ದೂರಿನಲ್ಲಿ ಬರೆದಿದ್ದೀರಾ ಎಂದರೆ ಸಾಕ್ಷಿಯು ಬರೆದಿಲ್ಲ, ನೆನಪಿಲ್ಲ ಎಂದು ನುಡಿಯುತ್ತಾರೆ. ಗಾಡಿಯಲ್ಲಿ ಬಂದ ಇಬ್ಬರು ಆಸಾಮಿಗಳನ್ನು ನಾನು ಸ್ಪಷ್ಟವಾಗಿ ನೋಡಿಲ್ಲ.

3. ಆ ನಂತರ ಆ ಆಸಾಮಿಗಳನ್ನು ಎಲ್ಲಿ ನೋಡಿದಿರಿ ಎಂದರೆ ಸಾಕ್ಷಿಯು ಮಹದೇಶ್ವರ ಪ್ರಾವಿಷನ್ ಸ್ಟೋರ್ ನಲ್ಲಿ ಸಿ.ಸಿ. ಟಿ.ವಿ. ಇದ್ದು, ಅದರಲ್ಲಿ ಕ್ಲಿಪ್ಸ್ ಅನ್ನು ಪೊಲೀಸರು ತೆಗೆದಿದ್ದರು, ಅದರಲ್ಲಿ ನೋಡಿ ಗುರುತಿಸಿದ್ದೇನೆ ಎಂದು

ನುಡಿಯುತ್ತಾರೆ. ನಂತರ ಆ ಆಸಾಮಿಗಳನ್ನು ಸುಬ್ರಮಣ್ಯಪುರಂ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ಪೊಲೀಸರು ನಿಮ್ಮ ಚಿನ್ನದ ಸರವನ್ನು ಕಿತ್ತುಕೊಂಡು ಹೋದವರು ಇವರೇ ಎಂದು ತೋರಿಸಿದ್ದಕ್ಕೆ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ನಾನು ಮೊದಲ ಬಾರಿ ನೋಡಿದ್ದು ಪೊಲೀಸ್ ಠಾಣೆಯಲ್ಲಿ ಮಾತ್ರ ಎಂದರೆ ಸರಿಯಲ್ಲ. ನನ್ನ ಚಿನ್ನದ ಸರ ಮಾಡಿಸಿದ ಕಾಲಕ್ಕೆ 12 ಗ್ರಾಂ ತೂಕವಿತ್ತು, ಕಳ್ಳತನವಾದ ಕಾಲಕ್ಕೆ 10 ಗ್ರಾಂ 800 ಮಿಲಿ ಗ್ರಾಂ ತೂಕವಿತ್ತು. ಅದೇ ಚೈನಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಿನ್ನದ ಸರವನ್ನು ಖರೀದಿ ಮಾಡಿದ್ದ ಬಿಲ್ಲನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಆ ಸರ ನಿಮ್ಮದೇ ಎಂದು ತೋರಿಸಲು ಯಾವುದೇ ಗುರುತು ಇದೆಯಾ ಎಂದರೆ ಸಾಕ್ಷಿಯು ಡಾಲರ್ ಇತ್ತು, ಅದರಿಂದ ನನ್ನದೇ ಎಂದು ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಿಪಿ-3 ದೂರಿನಲ್ಲಿ 12 ಗ್ರಾಂ ಚಿನ್ನದ ಸರ ಎಂದು ಬರೆದು, ಪೊಲೀಸರಿಂದ 10 ಗ್ರಾಂ ಚಿನ್ನದ ಸರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ಮಹಜರನ್ನು ಬರೆದವರ ಹೆಸರು ಗೊತ್ತಿಲ್ಲ. ದಿನಾಂಕ ಗೊತ್ತಿಲ್ಲ. ನಿಪಿ-5ಕ್ಕೆ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಹಾಕಿದ್ದೇನೆ. ನಿಪಿ-5ರಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ಯಾವುದೇ ಸರ ಕಳ್ಳತನವಾಗಿಲ್ಲ, ಆರೋಪಿ ಯಾರೂ ಎಂದು ನೋಡೇ ಇಲ್ಲ ಎಂದರೆ ಸರಿಯಲ್ಲ. ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಪೊಲೀಸರು ಈ ದಿನ ನ್ಯಾಯಾಲಯದ ಮುಂದೆ ಹೇಳಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.